ಕ್ರ ಸಂ	ಜಿಲ್ಲೆ	ಉದ್ದ (ಕಿ ಮೀ)	ಒಟ್ಟು (ರೂ ಲಕ್ಷಗಳಲ್ಲಿ)
18	ಕೊಡಗು	4134 63	467 32
19	ಕೋಲಾರ	6527 51	1502 45
20	ಕೊಪ್ಪಳ	2612 20	776 21
21	ಮಂಡ್ಯ	7732 45	1474 35
22	ಮೈಸೂರು	4715 75	1601 13
23	ರಾಯಚೂರು	3994 55	907 53
24	ಶಿವಮೊಗ್ಗ	6500 77	1988 85
25	ತುಮಕೂರು	9027 38	1766 55
26	ಉಡುಪಿ	7705 63	798 45
27	ಉತ್ತರ ಕನ್ನಡ	7767 60	1723 22
	ಒಟ್ಟು	**147212 36**	**31363 24**

982 (1180) ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ). ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸುವರ್ಣ ಗ್ರಾಮೋದಯ ಯೋಜನೆ ಕಾರ್ಯ ಪ್ರಾರಂಭವಾಗಿದೆಯೇ,

ಆ) ಹಾಗಿದ್ದಲ್ಲಿ, ಈ ಯೋಜನೆಗೆ ತಗಲುವ ವೆಚ್ಚ ಎಷ್ಟು,

ಇ) ಗ್ರಾಮಗಳ ಆಯ್ಕೆಗೆ ಯಾವ ಮಾನದಂಡವನ್ನು ಅನುಸರಿಸಲಾಗಿದೆ,

ಈ) ಈ ಯೋಜನೆಯಲ್ಲಿ ಆಯ್ಕೆ ಮಾಡಿದ ಗ್ರಾಮಗಳ ಕಾಮಗಾರಿಗಳನ್ನು ಯಾವಾಗ ಮಾಡಲಾಗುವುದು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಗ್ರಾಮಾಭಿವೃದ್ಧಿ ಯೋಜನೆ ತಯಾರಿಕೆ ಕಾರ್ಯ ಪ್ರಾರಂಭವಾಗಿದೆ

ಆ) ಹೆಚ್ಚುವರಿಯಾಗಿ ರೂ 1000 00 ಕೋಟಿಗಳು

ಇ) ಪ್ರತಿ ವ್ಯಕ್ತಿಗೆ ಅಂದಾಜು ರೂ 2500 ರಿಂದ 3000 ದವರೆಗೆ ಹೆಚ್ಚುವರಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗೆ ಅನುಗುಣವಾಗಿ ಹಾಗೂ ಡಾ ಡಿ ಎಂ ನಂಜುಂಡಪ್ಪನವರ ಸಮಿತಿಯ ವರದಿಯಲ್ಲಿ ವರ್ಗೀಕರಿಸಿದ ಅತ್ಯಂತ ಹಿಂದುಳಿದ, ಹೆಚ್ಚು ಹಿಂದುಳಿದ, ಹಿಂದುಳಿದ ಮತ್ತು ತುಲನಾತ್ಮಕವಾಗಿ ಮುಂದುವರಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆಯಲ್ಲಿ ಕ್ರಮವಾಗಿ 1 15, 1 10, 1 05 ಮತ್ತು 1 00 ವೇಟೇಜ್ ನೀಡಿ ತಾಲ್ಲೂಕಿನ ಜನಸಂಖ್ಯೆಯನ್ನು ನಿಗದಿಪಡಿಸಲಾಗಿದೆ ಈ ರೀತಿ ನಿಗದಿಪಡಿಸಿದ ಜನಸಂಖ್ಯೆಗೊಳಪಟ್ಟು ಸುಮಾರು 2000 ರಿಂದ 8000 ಜನಸಂಖ್ಯೆಯಿರುವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ

ಈ) 2007–ಫೆಬ್ರವರಿಯ 4ನೇ ವಾರದಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ

983 (590) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೆ,

ಆ) ಹಾಗಿದ್ದಲ್ಲಿ ಎಷ್ಟು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡಲಾಗುವುದು,

ಇ) ಲಿಂಗಸಗೂರು ತಾಲ್ಲೂಕಿಗೆ ಮಂಜೂರು ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆಯೇ?

ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಹೌದು

ಆ) 16